ಒಂದೂವರೆ ಗಂಟೆ ಭಾಷಣ ಮಾಡಿ ಹೋಗುತ್ತೇವೆ ಆದರೆ ಪರಿಸ್ಥಿತಿಯನ್ನು ನಾವು ಅರ್ಥ ಮಾಡಿಕೊಳ್ಳಬೇಕು ಆದ್ದರಿಂದ ನಾನು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ ಏನೆಂದರೆ ಈ ಅಭಾವ ಪರಿಸ್ಥಿತಿ ಬಗ್ಗೆ ಕೇವಲ ಒಣ ಭಾಷಣ ಮಾಡದೆ ಶಾಶ್ವತ ಪರಿಹಾರ ಪರಿಸ್ಥಿತಿ ಬಗ್ಗೆ ಕಮೀಷನ್ ನೇಮಕ ಮಾಡುವುದಕ್ಕೆ ಸರ್ಕಾರವನ್ನು ಒತ್ತಾಯ ಮಾಡದೇ ಹೋದರೆ, ಈ ಬರಗಾಲವನ್ನು ಎದುರಿಸುವುದು ಬಹಳ ಕಷ್ಟವಾಗುತ್ತದೆ.

(ಶ್ರೀ ಎಸ್.ಎಂ. ಕೃಷ್ಣರವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಆದುದರಿಂದ ಈ ಒಂದು ಶಾಶ್ವತ ಪರಿಹಾರಕ್ಕಾಗಿ ನೀವು ಒಂದು ಕಮಿಷನ್ ಅನ್ನು ನೇಮಕ ಮಾಡಬೇಕು ಈ ಅಭಾವ ಪರಿಸ್ಥಿತಿ ಈ ರಾಜ್ಯದ ಯಾವ ಭಾಗದಲ್ಲಾಗಲೀ ಆಗಿದ್ದಾಗ್ಗೆ ಬಾರದ ರೀತಿಯಲ್ಲಿ ವ್ಯವಸ್ಥೆಯನ್ನು ತಾವು ಮಾಡಬೇಕೆಂದು ಕಳಕಳಿಯಿಂದ ನಾನು ಮನವಿ ಮಾಡುತ್ತೇನೆ. ಜೊತೆಗೆ ಈ ಅಭಾವ ಪರಿಸ್ಥಿತಿ ಬಗ್ಗೆ ಬಹಳ ಹಣದಂರುಪಯೋಗವಾಗುತ್ತಿದೆ ಏತಕ್ಕೆಂದರೆ ಕೊಟ್ಟಿರತಕ್ಕಂಥ ಹಣ ಬಹಳ ಕಡಿಮೆ ತುಮಕೂರು ಜಿಲ್ಲೆಗೆ ೩೮ ಲಕ್ಷ ಕೊಟ್ಟಿದ್ದೀರಿ ಇದು ಡ್ರಿಂಕಿಂಗ್ ವಾಟರ್‌ಗೆ ಈ ೩೮ ಲಕ್ಷ ರೂಪಾಯಿನಿಂದ ನಮ್ಮ ಜಿಲ್ಲೆಯಲ್ಲಿ ಎಷ್ಟು ಡ್ರಿಂಕಿಂಗ್ ವಾಟರ್ ವೆಲ್ಸ್ ಮಾಡಬಹುದು ಎಷ್ಟು ಬೋರ್‌ವೆಲ್ಸ್ ಕೊರೆಯಬಹುದು ? ಒಂದು ಬೋರ್‌ವೆಲ್‌ಗೆ ೨೦ ರಿಂದ ೨೫ ಸಾವಿರ ರೂಪಾಯಿ ಬೇಕಾಗುತ್ತದೆ ಎಲ್ಲಾ ಕಡೆ ಬೋರ್‌ವೆಲ್ಸ್ ಕೊರೆಯುವುದಕ್ಕೆ ಕೂಡ ಆಗುವುದಿಲ್ಲ. ಕುಡಿಯುವ ನೀರಿನ ವ್ಯವಸ್ಥೆಗಾಗಿ ೩೮ ಲಕ್ಷ ರೂಪಾಯಿ ಕೊಟ್ಟಿದ್ದೀರಿ ಸಪ್ಲೈ ಆಫ್ ಫಾಡರ್ ಒಂದು ಜಿಲ್ಲೆಗೆ ೨ ಲಕ್ಷ ಕೊಟ್ಟಿದ್ದೀರಿ ಇದೇ ರೀತಿ ಎಲ್ಲಾ ಜಿಲ್ಲೆಯಲ್ಲೂ ನಾನು ನೋಡಿದೆ. ಕೆಲವು ದೊಡ್ಡ ಜಿಲ್ಲೆಗಳು ಇವೆ ಕೆಲವು ಮಿಡಿಯಂ ಜಿಲ್ಲೆಗಳು ಇವೆ ಇಲ್ಲೆಲ್ಲಾ ಕೊಟ್ಟಿರತಕ್ಕಂಥ ಹಣ ಬಹಳ ಕಡಿಮೆ ಇದೆ ಈ ಹಣದಿಂದ ಯಾವ ವ್ಯವಸ್ಥೆ ಕೂಡಾ ಆಗುವುದಿಲ್ಲ. ರಸ್ತೆ ಮಾಡಿಸಬೇಕೆಂದರೆ ಆ ಊರಿನ ವರಿಗೆ ಕೂಲಿ ಸಿಗಬೇಕೆಂದರೆ, ಏಂಪ್ಲಾಯ್‌ಮೆಂಟ್ ಜನರೇಷನ್ ಸ್ಕೀಮ್ ಮಾಡಬೇಕು ಇದಕ್ಕೆ ಎಷ್ಟು ಕೊಟ್ಟಿದ್ದೀರಿ ಎಂದರೆ ೭೩ ಲಕ್ಷ ಕೊಟ್ಟಿದ್ದೀರಿ ೭೩ಲಕ್ಷದಿಂದ ಎಂಪ್ಲಾಯ್‌ಮೆಂಟ್ ಜನರೇಷನ್ ಸ್ಕೀಮ್ ಎಲ್ಲಿ ಮಾಡುವುದಕ್ಕೆ ಆಗುತ್ತದೆ ಮಂಡ್ಯ ಜಿಲ್ಲೆಯಲ್ಲಿ ಅಷ್ಟೊಂದು ಅಭಾವ ಇಲ್ಲ ಏಂದು ಕಾಣುತ್ತದೆ. ನಾಗಮಂಗಲ ತಾಲ್ಲೂಕನ್ನು ಬಿಟ್ಟರೆ ಬೇರೆಡೆ ಅಷ್ಟು ಅಭಾವ ಇಲ್ಲ.

ಅಧ್ಯಕ್ಷರು.—ತಾವು ಸೋಮವಾರ ಭಾಷಣ ಮುಂದುವರಿಸಬಹುದು. ಈಗ ನಾನ್ ಆಫಿಷಿಯಲ್ ಬಿಸಿನೆಸ್ ತೆಗೆದುಕೆ ಳ್ಳೋಣ. ಪ್ರೊಫೆಸರ್ ನಂಜುಂಡಸ್ವಾಮಿ ಮತ್ತು ಟಿ.ಎಂ. ವಿರಂಜುನಾಥ್‌ರವರು ತಮ್ಮ ತಮ್ಮ ವಿಧೇಯಕಗಳನ್ನು ಮಂಡಿಸಬಹುದು.

ಖಾಸಗಿ ಕಾರ್ಯಕಲಾಪಗಳು

ಖಾಸಗಿ ಸದಸ್ಯರ ವಿಧೇಯಂಕಗಳು

೧. ೧೯೯೦ನೇ ಇಸವಿಯ ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಂಕ

ಮಂಡನೆಗೆ ಅನುಮತಿ ಕೋರಿಕೆ

ಪ್ರೊ: ಎಂ. ಡಿ. ನಂಜುಂಡಸ್ವಾಮಿ.—ಮಾನ್ಯ ಅಧ್ಯಕ್ಷರೇ, ೧೯೯೦ನೇ ಇಸವಿಯ ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಂಕವನ್ನು ಮಂಡಿಸಲು ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು.— ಪ್ರಸ್ತಾವ ಏನೆಂದರೆ

> ೧೯೯೦ನೇ ಇಸವಿಯ ಭಾರತೀಯ ದಂಡಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಂಕವನ್ನು ಮಂಡಿಸಲು ಅನುಮತಿಯನ್ನು ನೀಡುವುದು.

(ಪ್ರಸ್ತಾವ ಅಂಗೀಕೃತವಾಯಿತು, ವಿಧೇಯಂಕವನ್ನು ಮಂಡಿಸಲು ಅನುಮತಿ ನೀಡಲಾಯಿತು)

ಪ್ರೊ: ಎಂ.ಡಿ. ನಂಜುಂಡಸ್ವಾಮಿ.—ಮಾನ್ಯ ಅಧ್ಯಕ್ಷರೇ, ೧೯೯೦ನೇ ಇಸವಿಯ ಭಾರತೀಯ ದಂಡಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.— ವಿಧೇಯಕವನ್ನು ಮಂಡಿಸಲಾಯಿತು*

೨, ೧೯೯೦ನೇ ಇಸವಿಯ ಬೆಂಗಳೂರು ಅಭಿವೃದ್ಧಿ (ಪ್ರಾಧಿಕಾರ ತಿದ್ದುಪಡಿ) ವಿಧೇಯಕ

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಟಿ. ಎಂ. ಮಂಜುನಾಥ್.— ಮಾನ್ಯ ಅಧ್ಯಕ್ಷರೇ, ೧೯೯೦ನೇ ಇಸವಿಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು.— ಪ್ರಸ್ತಾವ ಏನೆಂದರೆ,

೧೯೯೦ನೇ ಇಸವಿಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ನೀಡುವುದು

(ಪ್ರಸ್ತಾಪ ಅಂಗೀಕಾರವಾಯಿತು, ವಿಧೇಯಕವನ್ನು ಮಂಡಿಸಲು ಅನುಮತಿ ನೀಡಲಾಯಿತು)

ಶ್ರೀ ಟಿ.ಎಂ. ಮಂಜುನಾಥ್.— ೧೯೯೦ನೇ ಇಸವಿಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.— * ವಿಧೇಯಕವನ್ನು ಮಂಡಿಸಲಾಯಿತು. *

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಟಿ.ಎಂ. ಮಂಜುನಾಥ್.— ಮಾನ್ಯ ಅಧ್ಯಕ್ಷರೇ, ೧೯೯೦ನೇ ಇಸವಿಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಹಾಗೂ ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.— ಪ್ರಸ್ತಾವ ಏನೆಂದರೆ

೧೯೯೦ನೇ ಇಸವಿಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಈ ಸಭೆಯು ಪರ್ಯಾಲೋಚಿಸುವುದು.

ಪ್ರಸ್ತಾವವನ್ನು ಮಂಡಿಸಲಾಯಿತು

† ಶ್ರೀ ಟಿ.ಎಂ. ಮಂಜುನಾಥ್ (ಶಿಪಟೂರು).— ಮಾನ್ಯ ಅಧ್ಯಕ್ಷರೇ, ಪರ್ಯಾಲೋಚನಾ ಪ್ರಸ್ತಾವವನ್ನು ಮಂಡಿಸುತ್ತಾ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಏನಿದೆ ಇದು ೧೯೭೬ನೇ ಇಸವಿಯಿಂದ ಬೆಂಗಳೂರು ನಗರದಲ್ಲಿರತಕ್ಕಂಥ ಸೈಟ್‌ಗಳನ್ನು ವಿಲೇವಾರಿ ಮಾಡತಕ್ಕ ಬಗ್ಗೆ ಕೆಲವಾರು ಕಾನೂನುಗಳನ್ನು ಆಕ್ಟ್‌ಗಳನ್ನು ಮಾಡಿದ್ದಾರೆ. ಆದರೆ ಇದರಲ್ಲಿ ಸಿ.ಎ. ಸೈಟ್‌ಗಳು ಏನಿವೆ ಇದರ ಬಗ್ಗೆ ೧೯೮೨ನೇ ಇಸವಿಯಲ್ಲಿ ಒಂದು ತಿದ್ದುಪಡಿ ತರಲಾಯಿತು. ಇದು ಸಾರ್ವಜನಿಕ ಹಿತದೃಷ್ಟಿಯಿಂದ ಆಸ್ಪತ್ರೆಗಳು, ಪೋಲೀಸ್ ಸ್ಟೇಷನ್‌ಗಳು ಮತ್ತು ಪಾಠಶಾಲೆಗಳು ಹಾಗೂ ಆಧ್ಯಾತ್ಮಿಕ ಕೇಂದ್ರಗಳಿಗೆ ಈ ಸಿ.ಎ. ಸೈಟ್‌ಗಳನ್ನು ಕೊಡಬೇಕೆಂಬ ಒಂದು ತಿದ್ದುಪಡಿ ಆಗ ತಂದಿದ್ದರು. ಆದರೆ ೧೯೮೪ನೇ ಇಸವಿಯಲ್ಲಿ ಹೀಗೆ ಮಾಡಬಾರದೆಂದು ಒಂದು ವಿಧೇಯಕವನ್ನು ತಂದಂ ಆಗಿನ ಸರಕಾರ ಅದನ್ನು ನಿಲ್ಲಿಸಿತು. ಹಾಗೆ ನಿಲ್ಲಿಸಿದರೂ ಸಹ ೧೯೮೪ನೇ ಇಸವಿಯಿಂದೀಚೆಗೆ ಸಾರ್ವಜನಿಕರ ಶ್ರೇಯಸ್ಸಿಗಾಗೋಸ್ಕರ ಅಂದರೆ ಆಸ್ಪತ್ರೆ ಕಟ್ಟುವುದಕ್ಕೆ ಉಳಿದಂತೆ ದೇವಸ್ಥಾನಗಳನ್ನು ಕಟ್ಟುವುದಕ್ಕೆ ಸಾಂಸ್ಕೃತಿಕ ಕಟ್ಟಡಗಳನ್ನು ಕಟ್ಟುವುದಕ್ಕೆ ಆಧ್ಯಾತ್ಮಿಕ ಕಟ್ಟಡಗಳನ್ನು ಕಟ್ಟುವುದಕ್ಕೆ ಈ ರೀತಿ ಸುಮಾರು ೪೮ ಸಂಸ್ಥೆಗಳಿಗೆ ಈಗಾಗಲೇ ಕೊಟ್ಟು ಬಿಟ್ಟಿದ್ದಾರೆ. ಹೀಗೆ ಪಡೆದಿರತಕ್ಕಂಥವರು ಏನು ಮಾಡಿದ್ದಾರೆಂದರೆ ಈಗಾಗಲೇ ಲೈಸೆನ್ಸ್ ಪಡೆದು ಕಟ್ಟಡಗಳನ್ನು ಕಟ್ಟಿದ್ದಾರೆ ದೇವಸ್ಥಾನಗಳನ್ನು ಕಟ್ಟಿದ್ದಾರೆ. ಪಾಠಶಾಲೆಗಳನ್ನು ಕಟ್ಟಿದ್ದಾರೆ. ಆಮೇಲೆ ೧೯೮೬ನೇ ಇಸವಿಯಲ್ಲಿ ಅವರು ಒಂದು ತಿದ್ದುಪಡಿಯನ್ನು ತಂದರು. ಇದನ್ನೆಲ್ಲಾ

* ಅನುಬಂಧ *